ಮಂಡ್ಯ ತಾಲ್ಲೂಕು, ಹೊನ್ನಾಯ್ಕನಹಳ್ಳಿಯ ಪ್ರೌಢಶಾಲೆಗೆ ಕಟ್ಟಡದ ಕೊರತೆ

541 (934) ಶ್ರೀ ಶ್ರೀನಿವಾಸ್. ಎಂ (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕು, ಕೆರೆಗೋಡು ಹೋಬಳಿ ಹೊನ್ನಾಯ್ಕನಹಳ್ಳಿಯಲ್ಲಿರುವ ಪ್ರೌಢಶಾಲೆಗೆ ಕಟ್ಟಡವಿಲ್ಲದೇ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ಪ್ರೌಢಶಾಲೆಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರೌಢಶಾಲೆಯನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಪ್ರೌಢಶಾಲೆಗೆ ಕಟ್ಟಡ ಇಲ್ಲದಿರುವುದರಿಂದ, ಸ್ಥಳೀಯ ಹಾಗೂ ಸುತ್ತಮುತ್ತಲ ಗ್ರಾಮಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಈ ಪ್ರೌಢಶಾಲೆಯ ಕಟ್ಟಡದ ಕಾಮಗಾರಿಯನ್ನು ಸರ್ಕಾರ ಯಾವಾಗ ಪ್ರಾರಂಭಿಸುತ್ತದೆ?

ಶ್ರೀ ವಿ.ಎಸ್. ಆಚಾರ್ಯ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ನರ್ಬಾಡ್ ಆರ್ಥಿಕ ಸೌಲಭ್ಯದ ಆರ್‌ಡಿಐಫ್–16ರ ಯೋಜನೆಯಡಿ ಸರ್ಕಾರಿ ಪ್ರೌಢಶಾಲೆ, ಹೊನ್ನಾಯ್ಕನಹಳ್ಳಿ ಇಲ್ಲಿಗೆ ಕೊಠಡಿ ನಿರ್ಮಾಣಕ್ಕೆ ರೂ.20.00 ಲಕ್ಷ ಮಂಜೂರು ಮಾಡಲಾಗಿದೆ. 2010–11ನೇ ಸಾಲಿನಲ್ಲಿ ಜಿಲ್ಲಾ ವಲಯದ ಪ್ರೌಢಶಾಲೆಗಳ ಕಟ್ಟಡ ನಿರ್ಮಾಣ ಸುಧಾರಣೆ [ನಬಾರ್ಡ] ಇದರಡಿ ಒದಗಿಸಿರುವ ಅನುದಾನದಲ್ಲಿ ಆರ್‌ಡಿಎಫ್–15ರ ಕಾಮಗಾರಿಗೆ ಬಳಕೆ ಮಾಡಿಕೊಂಡ ನಂತರ ಉಳಿಕೆಯಾಗುವ ಅನುದಾನದಲ್ಲಿ ಆರ್‌ಡಿಐಫ್–16ರ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸಬಹುದೆಂದು ತಿಳಿಸಲಾಗಿದೆ. ಅದರಂತೆ ಜಿಲ್ಲಾ ಪಂಚಾಯತ್, ಮಂಡ್ಯರವರ ಅಧಿಕೃತ ಜ್ಞಾಪನ ಸಂಖ್ಯೆ: ಉಕಾ1/ಸಿ7/ಕಟ್ಟಡ/ವಿವ/01/2010–11 ದಿ: 20.12.2010 ರಲ್ಲಿ ಕಾಮಗಾರಿಗೆ ಅನುಷ್ಠಾಧಿಕಾರಿಗಳನ್ನಾಗಿ ಕೆ.ಆರ್.ಬಿ.ಸಿ ರವರನ್ನು ನೇಮಿಸಿ ಆದೇಶಿಸಲಾಗಿದೆ.

ಇ) ಬಂದಿದೆ.

ಈ) ಕ್ರಮ ಕೈಗೊಳ್ಳಲಾಗುವುದು.

ಉ) ನಿವೇಶನ ಸಮಸ್ಯೆ ಇತ್ಯರ್ಥವಾದ ತಕ್ಷಣ ಶಾಲಾ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು.

ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಯ ನಿರ್ವಹಣೆ

544 (928) ಶ್ರೀ ಸುಭಾಷ್ ಆರ್ ಗುತ್ತೇದಾರ್. (ಅಳಂದ) : ಮಾನ್ಯ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಧಾರ್ಮಿಕ ದತ್ತಿ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಯು ಕೆಲಸ ನಿರ್ವಹಿಸುತ್ತಿದೆಯೇ?

ಆ) ಸರ್ಕಾರವು ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಅನುದಾನವೆಷ್ಟು? (ಇಲಾಖಾವಾರು ಹಾಗೂ ಕಾಮಗಾರಿಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು);

ಇ) ಇಲ್ಲಿಯವರೆಗೆ ಕಾಮಗಾರಿಗಳಿಗೆ ಖರ್ಚಾದ ಹಣವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು);

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಧಾರ್ಮಿಕ ದತ್ತಿ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) :

ಅ) ಹೌದು. ರಾಜ್ಯದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಯು ಕೆಲಸ ನಿರ್ವಹಿಸುತ್ತಿದೆ.

ಆ) ಸರ್ಕಾರವು ಡಾ. ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲಿಯವರೆಗೆ ಕಾಮಗಾರಿಗಳಿಗಾಗಿ ಖರ್ಚಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.